ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್

(ಕರ್ನಾಟಕ ಸರ್ಕಾರದಿಂದ ಅನುದಾನಿತ ಸ್ವಾಯತ್ತ ಹಾಗೂ ಎಐಸಿಟಿಇ ಮಾನ್ಯತೆ ಪಡೆದ ಸಂಸ್ಥೆ)

ಜೆಎಸ್‌ಎಸ್ ವಿಪಾ/ಡಿವಿಪಿ/ಕ್ರೀಡೆ/2022-23/ 29-03-2023

ನಿರ್ದೇಶಕರು
ತಾಂತ್ರಿಕ ಶಿಕ್ಷಣ ವಿಭಾಗ
ಜೆಎಸ್‌ಎಸ್ ಮಹಾವಿದ್ಯಾಪೀಠ
ಜೆಎಸ್‌ಎಸ್ ಟಿಐ ಸಮುಚ್ಛಯ
ಮೈಸೂರು.

ಮಾನ್ಯರೆ,

ವಿಷಯ: ಪಾಲಿಟೆಕ್ನಿಕ್‌ನ ಹಿರಿಯ ವಿದ್ಯಾರ್ಥಿಯಾದ ಶ್ರೀ ಕೆ ಎಸ್ ಅವಿನಾಶ್‌ರವರು ಫ್ರಾನ್ಸ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಅಬಿಲಂಪಿಕ್ಸ್ ಸ್ಪರ್ಧೆಯಲ್ಲಿ ಭಾಗವಹಿಸಿ ಕಂಚಿನ ಪದಕ ಪಡೆದಿರುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪಾಲಿಟೆಕ್ನಿಕ್‌ನ ಜ್ಯುಯಲರಿ ಡಿಸೈನ್ & ಟೆಕ್ನಾಲಜಿ ವಿಭಾಗದಲ್ಲಿ 2019-20ನೇ ಸಾಲಿನಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವ ಹಿರಿಯ ವಿದ್ಯಾರ್ಥಿ ಶ್ರೀ ಕೆ ಎಸ್ ಅವಿನಾಶ್‌ರವರು ದಿನಾಂಕ: 23-03-2023 ರಿಂದ 26-03-2023ರವರೆಗೆ ಫ್ರಾನ್ಸ್‌ನಲ್ಲಿ National Abilympics Association of India (NAAI), New Delhi ರವರ ಸಹಯೋಗದೊಂದಿಗೆ ನಡೆದ 10ನೇ ಅಂತರರಾಷ್ಟ್ರೀಯ ಅಬಿಲಂಪಿಕ್ಸ್‌ನಲ್ಲಿ ಚಿನ್ನಾಭರಣ ತಯಾರಿಕೆ (Jewellery Making) ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಈ ಸ್ಪರ್ಧೆಯಲ್ಲಿ 14 ವಿಶೇಷಚೇತನ ಸ್ಪರ್ಧಾರ್ಥಿಗಳು ಭಾರತದ ವಿವಿಧ ರಾಜ್ಯಗಳಿಂದ 13 ವಿವಿಧ ಕೌಶಲ್ಯ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು. ಇದರಲ್ಲಿ ನಮ್ಮ ಪಾಲಿಟೆಕ್ನಿಕ್‌ನ ವಿದ್ಯಾರ್ಥಿ ಶ್ರೀ ಕೆ ಎಸ್ ಅವಿನಾಶ್‌ರವರು ಭಾಗವಹಿಸಿ ಕಂಚಿನ ಪದಕ ಪುರಸ್ಕೃತರಾಗಿರುತ್ತಾರೆ.

ಈ ಹಿಂದೆ ಇವರು ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ಸಂದರ್ಭದಲ್ಲಿ ಅಂದರೆ ದಿನಾಂಕ: 19 ಮತ್ತು 20 ಜುಲೈ 2019ರಂದು ಚೆನ್ನೈನಲ್ಲಿ ನಡೆದ ದಕ್ಷಿಣ ವಲಯಮಟ್ಟದ ಅಬಿಲಂಪಿಕ್ಸ್ ಚಿನ್ನಾಭರಣ ತಯಾರಿಕೆ ಸ್ಪರ್ಧೆಯಲ್ಲಿ ಭಾಗವಹಿಸಿ ಚಿನ್ನದ ಪದಕ ಪಡೆದಿರುತ್ತಾರೆ.

ಹಾಗೂ ದಿನಾಂಕ: 15 ಮತ್ತು 16 ನವೆಂಬರ್ 2019ರಂದು ಎಐಸಿಟಿಇ, ನವದೆಹಲಿಯಲ್ಲಿ ನಡೆದ ರಾಷ್ಟ್ರಮಟ್ಟದ ಅಬಿಲಂಪಿಕ್ಸ್ ಚಿನ್ನಾಭರಣ ತಯಾರಿಕೆ ಸ್ಪರ್ಧೆಯಲ್ಲಿ ಭಾಗವಹಿಸಿ ಬೆಳ್ಳಿ ಪದಕವನ್ನು ಪಡೆದಿರುತ್ತಾರೆ.

ಶ್ರೀ ಕೆ ಎಸ್ ಅವಿನಾಶ್‌ರವರು ಜನ್ಮತಃ ಶ್ರವಣದೋಷವುಳ್ಳ ವಿದ್ಯಾರ್ಥಿಯಾಗಿದ್ದು ಬಾಲ್ಯದಿಂದಲೂ ಶ್ರವಣೋಪಕರಣವನ್ನು ಬಳಸುತ್ತಿದ್ದಾರೆ. ಇವರು ಚಿನ್ನಾಭರಣ ತಯಾರಿಕೆಯ ವಿಷಯದಲ್ಲಿ ತುಂಬಾ ಆಸಕ್ತಿ ಹೊಂದಿದ್ದು ಡಿಪ್ಲೊಮ ವ್ಯಾಸಂಗದ ಸಂದರ್ಭದಲ್ಲಿ ಈ ವಿಷಯದಲ್ಲಿಯೇ ಹೆಚ್ಚಿನ ಪ್ರಯೋಗಾತ್ಮಕ ಕೆಲಸವನ್ನು ನಿರ್ವಹಿಸಿ ವಿಭಾಗದಲ್ಲಿ ಹೆಚ್ಚು ಅಧ್ಯಯನ ಮಾಡಿ ಉತ್ತಮ ವಿದ್ಯಾರ್ಥಿ / ಅಧ್ಯಯನಶೀಲ ವಿದ್ಯಾರ್ಥಿಯೆಂದು ಹೆಸರು ಪಡೆದಿರುತ್ತಾರೆ.

ಶ್ರೀ ಕೆ ಎಸ್ ಅವಿನಾಶ್‌ರವರು ವಲಯಮಟ್ಟ, ರಾಷ್ಟ್ರಮಟ್ಟ ಹಾಗೂ ಅಂತರಾಷ್ಟ್ರೀಯ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸುವ ಮೊದಲು ಜ್ಯುಯಲರಿ ಡಿಸೈನ್ & ಟೆಕ್ನಾಲಜಿ ವಿಭಾಗದ ಸಿಬ್ಬಂದಿವರ್ಗದವರು ಸಂದರ್ಭಾನುಸಾರವಾಗಿ ಅವಶ್ಯಕ ತರಬೇತಿ, ಪ್ರೋತ್ಸಾಹ ನೀಡಿರುತ್ತಾರೆ. ಅಲ್ಲದೆ, ಕೋವಿಡ್-19 ಹಿನ್ನೆಲೆಯ ಸಂದರ್ಭದಲ್ಲಿ ಆನ್‌ಲೈನ್ ಮೂಲಕ ತರಬೇತಿ ನೀಡಲಾಗಿರುತ್ತದೆ. ಈ ಎಲ್ಲಾ ತರಬೇತಿಗಳನ್ನು National Abilympics Association of India (NAAI), New Delhi ರವರು ಅವಲೋಕಿಸಿ ಪ್ರತಿ ಹಂತದಲ್ಲಿಯೂ ಮೌಲ್ಯಮಾಪನ ಮಾಡಿದ್ದು ಸದರಿ ವಿದ್ಯಾರ್ಥಿಯು ಪ್ರಸ್ತುತ ಫ್ರಾನ್ಸ್‌ನಲ್ಲಿ ನಡೆದ ಅಂತರಾಷ್ಟ್ರೀಯಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಲು ಶಿಫಾರಸ್ಸು ಮಾಡಿ ಎಲ್ಲಾ ರೀತಿಯ ಸಹಕಾರ ನೀಡಿರುತ್ತಾರೆ.

ಈ ವಿದ್ಯಾರ್ಥಿಯ ಸಾಧನೆಯು ವಿಶೇಷತೆಯಾಗಿದ್ದು ರಾಷ್ಟ್ರಕ್ಕೆ, ಜೆಎಸ್‌ಎಸ್ ಮಹಾವಿದ್ಯಾಪೀಠಕ್ಕೆ ಹಾಗೂ ಪಾಲಿಟೆಕ್ನಿಕ್‌ಗೆ ಹೆಮ್ಮೆಯ ವಿಷಯವೆಂದು ತಿಳಿಸಲು ಹರ್ಷಿಸುತ್ತೇವೆ ಹಾಗೂ ಈ ಎಲ್ಲಾ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಿರುವ ಆಡಳಿತಮಂಡಳಿಗೆ ಹಾಗೂ National Abilympics Association of India (NAAI), New Delhi ರವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

ವಂದನೆಗಳೊಡನೆ,

ತಮ್ಮ ನಂಬುಗೆಯ,

(ಬಿ ಇಳಂಗೋವನ್)
ಪ್ರಾಂಶುಪಾಲರು.




*Dear Mr Avinash, the award won by you stands alone proudly witnessing your hard work and dedication which in turn have brought glory to our country and JSS. We feel proud and happy for your success. Keep going in your life and achieve your all dreams with your hard work. On behalf of JSS, Congratulations for your achievement.*

*My heartfelt thanks to NAAI and Sarthak Educational Trust for having provided endless support to Mr Avinash for his Iconic achievement and Congratulations to Entire crew.*

*B. Elangovan*
*Principal*
*JSS Polytechnic for the Differently Abled, Mysuru, Karnataka*




